**<u>2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಹಾಗೂ ವಿಶೇಷ ನ್ಯಾಯಾಲಯ ದಾವಣಗೆರೆ .</u>**

SC. No.08-2024

ದೋ.ಸಾ. 1
ಫ್ರಾ.ಸಾ. 1
ಪ್ರ.ವ.ಬೊ.ದಿನಾಂಕ. 21-07-2026

| | | |
|---|---|---|
| ಹೆಸರು | - | ಪ್ರದೀಪ್ |
| ತಂದೆ ಹೆಸರು | - | ಈರಪ್ಪ |
| ವಯಸ್ಸು | - | 38 ವರ್ಷ |
| ಉದ್ಯೋಗ | - | ವ್ಯವಸಾಯ |
| ವಾಸ ಸ್ಥಳ | - | ಕುಂಕೋವ ಗ್ರಾಮ, ನ್ಯಾಮತಿ ತಾಲ್ಲೂಕು |

ಮುಖ್ಯವಿಚಾರಣೆಃ - ಮಾನ್ಯ ಸರ್ಕಾರಿ ಅಭಿಯೋಜಕರಿಂದ

1. ಚಾ.ಸಾ.6 ನನ್ನ ತಂದೆ. ಚಾ.ಸಾ.7 ನನ್ನ ತಾಯಿ. ಚಾ.ಸಾ.8 ಮತ್ತು 9 ರ ಪರಿಚಯ ಇದೆ. ಅದೇ ರೀತಿ ಚಾ.ಸಾ.16 ರಿಂದ 20 ರವರ ಪರಿಚಯ ಇದೆ.

2. ಮೃತ ಶ್ವೇತಾ ನನ್ನ ತಂಗಿ. ನನಗೆ ನ್ಯಾಯಾಲಯದ ಮುಂದೆ ಇರುವ ಆರೋಪಿತರ ಪರಿಚಯ ಇರುತ್ತದೆ. ಆರೋಪಿ 1 ನನ್ನ ತಂಗಿ ಶ್ವೇತಾಳ ಗಂಡ. ಆರೋಪಿ 2 ಹರೀಶ್ ಮತ್ತು ಆರೋಪಿ 3 ಗಿರೀಶ್ 1 ನೇ ಆರೋಪಿಯ ಅಣ್ಣಂದಿರು. ಆರೋಪಿ 4 ಸುನಂದಮ್ಮ ಆರೋಪಿ 1 ರ ತಾಯಿ. ಮೃತ ಹನುಮಂತಪ್ಪ(ಆರೋಪಿ 5) ಆರೋಪಿ 1 ರ ತಂದೆ. ಆರೋಪಿ 6 ಶೋಭ ಆರೋಪಿ 1 ರ ಅಕ್ಕ. ಆರೋಪಿ 7 ಹಾಲೇಶ್ ಆರೋಪಿ 1 ರ ಸೋದರ ಮಾವ.

3. ಮದುವೆಗಿಂತ ಮುಂಚೆ ಹೊನ್ನಾಳಿ ಮಠದಲ್ಲಿ ನಮ್ಮ ಚಿಕ್ಕಪ್ಪಂದಿರು ಹಾಗೂ ಆರೋಪಿತರ ಮಧ್ಯೆ ಮಾತುಕತೆಯಾಗಿದ್ದು, ಆರೋಪಿ ಪರ ವರದಕ್ಷಿಣೆ ಎಂದು ಕೇಳಿದಾಗ ನಾವು ನಾಲ್ಕೂವರೆ ತೊಲ ಸರ, ಇಬ್ಬರಿಗೂ ಒಂದೊಂದು ಚೈನು, ಹೆಣ್ಣಿಗೆ ಕಾಲ್ ಚೈನ್ ಹಾಗೂ 70 ಸಾವಿರ ಹಣ ಕೊಡುತ್ತೇವೆ ಎಂದು ಹೇಳಿದೆವು. ಆ ಸಮಯದಲ್ಲಿ ಗೋಪಾಲಪ್ಪ, ಬಸವರಾಜಪ್ಪ, ಕೃಷ್ಣಪ್ಪ, ಶಾಮಪ್ಪ, ಬಾಲಪ್ಪ, ಜನಾರ್ಧನ್ ಹಾಗೂ ಇನ್ನು ಇತರರು ಇದ್ದರು. ನಾವು ಅವರ ಬೇಡಿಕೆಯ ಮೇರೆಗೆ ಮೇಲಿನ ವಸ್ತುಗಳನ್ನು ಕೊಟ್ಟೆವು. ಮದುವೆಯನ್ನು ಚೌಲ್ಟ್ರಿಯಲ್ಲಿ ಮಾಡಿಕೊಡಬೇಕು ಎಂದು ಹೇಳಿದ್ದರು. ಅದಕ್ಕೆ ನಾವು ಒಪ್ಪಿದ್ದೆವು, ಆ ಸಮಯದಲ್ಲಿ ಕರೋನ ಇತ್ತು. ಹೀಗಾಗಿ ಮದುವೆಯನ್ನು ಕೆಲವೇ ಜನಗಳನ್ನು ಕರೆದು ನಮ್ಮ ಮನೆಯ ಮುಂದೆ ಮಾಡಿಕೊಟ್ಟೆವು. ನನ್ನ ತಂಗಿ ಆರೋಪಿ 1 ಮದುವೆ ದಿಃ 14-05-2020 ರಂದು ಆಗಿರುತ್ತದೆ. ಈ ಕುರಿತಾಗಿ ಮದುವೆ ಕಾರ್ಡನ್ನು ನಾವು ಮಾಡಿಸಿದ್ದು, ಈಗ ಸದರಿ ಕಾರ್ಡನ್ನು ನೋಡುತ್ತಿದ್ದು, ಅದನ್ನು ನಿ.ಪಿ.1 ಎಂದು ಗುರುತಿಸಲಾಯಿತು.

4. ನಾವು ನಾಲ್ಕೂವರೆ ತೊಲ ಚೈನನ್ನು ನ್ಯಾಮತಿಯಲ್ಲಿ ಮಾಡಿಸಿದ್ದೆವು ಹಾಗೂ ಎರಡೂವರೆ ತೊಲ ಚೈನು ಮತ್ತು ಡಾಲರ್ ಅನ್ನು ನ್ಯಾಮತಿಯಲ್ಲಿಯೇ ಮಾಡಿಸಿದ್ದೆವು. ಈ ಕುರಿತಾಗಿ ಅಂಗಡಿಯವರು ರಸೀದಿಯನ್ನು

ನೀಡಿರುತ್ತಾರೆ. ಈಗ ನೋಡುತ್ತಿರುವ ಮೂರು ರಸೀದಿಗಳನ್ನು ಬಂಗಾರದ ಅಂಗಡಿಯವರು ಸರ ಮತ್ತು ಚೈನು ಮತ್ತು ಕಾಲು ಚೈನಿಗೆ ನೀಡಿದ್ದು, ಅವುಗಳನ್ನು ಕ್ರಮವಾಗಿ ನಿ.ಪಿ.2 ರಿಂದ 4 ಎಂದು ಆರೋಪಿ ಪರ ವಕೀಲರ ತಕರಾರಿಗೊಳಪಟ್ಟು ಗುರುತಿಸಲಾಯಿತು. ಈಗ ನೋಡುತ್ತಿರುವ ನಾಲ್ಕು ಪೋಟೋಗಳು ಮದುವೆ ಕಾಲಕ್ಕೆ ತೆಗೆದ ಪೋಟೋಗಳಾಗಿದ್ದು, ಅವುಗಳನ್ನು ಒಟ್ಟಾರೆ ನಿ.ಪಿ.5 ಎಂದು ಗುರುತಿಸಲಾಯಿತು.

5. ಮದುವೆಯಾದ ನಂತರ ನನ್ನ ತಂಗಿ ಶ್ವೇತಾ ಗಂಡನ ಮನೆಗೆ ಹೋಗಿ ಅಲ್ಲಿ ಹಿರೇಬಾಸೂರಿನಲ್ಲಿ ವಾಸವಾಗಿದ್ದಳು. ಅವರೊಂದಿಗೆ ಆರೋಪಿ 1 ರಿಂದ 5 ರವರು ಇರುತ್ತಿದ್ದರು. ಹಾಗೂ ಆರೋಪಿ 6 ಮತ್ತು 7 ಬರುವುದು ಹೋಗುವುದು ಮಾಡುತ್ತಿದ್ದರು.
6. ನನ್ನ ತಂಗಿಗೆ ದಾಂಪತ್ಯದಲ್ಲಿ ಒಂದು ಗಂಡು ಮಗು ಜನಿಸಿತ್ತು. ಅದರ ಹೆಸರು ಅನಿಕೇತ್ ಎಂದು ಇರುತ್ತದೆ. ಮಗುವಾದ ನಂತರ ಆರೋಪಿ 1 ರಿಂದ 5, 6 ಮತ್ತು 7 ರವರು ವಿಪರೀತ ಕಿರುಕುಳವನ್ನು ನನ್ನ ತಂಗಿಗೆ ಕೊಡಲು ಪ್ರಾರಂಭಿಸಿದರು. ಅವರು ಮದುವೆಯನ್ನು ಸರಳವಾಗಿ ಮನೆಯ ಮುಂದೆ ಮಾಡಿಕೊಟ್ಟಿರಿ, ಒಪ್ಪಿದಂತೆ ಚೌಲ್ಟ್ರಿಯಲ್ಲಿ ಮಾಡಲಿಲ್ಲ, ರೇಶನ್ ಖರ್ಚು ಉಳಿದಿದೆ, ಮನೆಗೆ ಹೋಗಿ ದುಡ್ಡು ಇಸ್ಕೊಂಡು ಬಾ, ಚಿಕ್ಕ ಚಿಕ್ಕ ವಿಷಯಕ್ಕೆ ಗಲಾಟೆ ಮಾಡುತ್ತ ದಿನಾಲೂ ಕಿರುಕುಳ ಕೊಡುತ್ತಿದ್ದರು. ಶ್ವೇತಾ ಏನು ಕೆಲಸ ಮಾಡಿದರು ಅದರಲ್ಲಿ ತಪ್ಪು ಹುಡುಕುತ್ತಿದ್ದರು. ಆರೋಪಿತರು ಒಂದು ಲಕ್ಷ ದುಡ್ಡನ್ನು ತೆಗೆದುಕೊಂಡು ಬಾ ಎಂದು ಅವಳಿಗೆ ಪೀಡಿಸುತ್ತಿದ್ದರು.
7. ಈ ಕುರಿತಾಗಿ ನನ್ನ ತಂಗಿ ನನಗೆ ಒಂದು ಸಲ ಹೇಳಿದ್ದಳು. ಆಗ ನಾನು ಚಾ.ಸಾ.17, 21, 22 ಎಲ್ಲರೂ ಸೇರಿ ಆರೋಪಿತರ ಮನೆಗೆ ಹೋಗಿ ಒಂದು ಸಭೆ ಮಾಡಿ ಆ ರೀತಿ ಮಾಡಬೇಡ ಎಂದು ಹೇಳಿದೆವು, ಹೊಡೆಯುವುದು ಬಡೆಯುವುದು ಮಾಡಬೇಡಿ, ನಾವು ಬಡವರಾದರು ಸುಖವಾಗಿ ಅವಳನ್ನು ಸಾಕಿದ್ದೇವೆ ಎಂದು ಹೇಳಿದೆವು. ಆ ಸಮಯದಲ್ಲಿ ಆರೋಪಿತರು ಎಲ್ಲರೂ ಸಹ ಇದ್ದರು. ಆ ಸಮಯದಲ್ಲಿ ಆರೋಪಿ 1 ವೆಂಕಟೇಶ್ ನನ್ನ ತಂಗಿ ಹಾಗೆ ಮಾಡುತ್ತಾಳೆ, ಹೀಗೆ ಮಾಡುತ್ತಾಳೆ, ಅವಳು ಹೊಂದಿಕೊಂಡು ಹೋಗದೇ ಇದ್ದರೆ ಸಾಯಿಸಿಯೇ ಬಿಡುತ್ತೇನೆ ಎಂದು ನನ್ನೆದುರಿಗೆ ಹೇಳಿದ್ದನು.
8. ಆ ರೀತಿ ನಾವು ಪಂಚಾಯಿತಿ ಮಾಡಿದ ನಂತರ ಸ್ವಲ್ಪ ದಿನ ಆರೋಪಿತರು ನನ್ನ ತಂಗಿಯನ್ನು ಚೆನ್ನಾಗಿ ನೋಡಿಕೊಂಡರು. ಅದಾಗಿ ಎರಡು ಮೂರು ತಿಂಗಳ ನಂತರ ಮತ್ತೆ ಕಿರುಕುಳ ಪ್ರಾರಂಭವಾಯಿತು. ನಾವು ಪೋನ್ ಮಾಡಿದರು ಸಹ ಸ್ಪಷ್ಟವಾಗಿ ಮಾತನಾಡಲು ಕೊಡದೇ ಏನು ಮಾತನಾಡುತ್ತೇವೆ ಎಂದು ಅನುಮಾನ ಪಡುತ್ತಿದ್ದರು.
9. ನನ್ನ ತಂಗಿ ಶ್ವೇತಾಳಿಗೆ ಬೆನ್ನು ನೋವು ಇದ್ದು, ಅವಳಿಗೆ ಆಸ್ಪತ್ರೆಗೆ ಕರೆದುಕೊಂಡು ಹೋಗಿ ತೋರಿಸಿರಲಿಲ್ಲ. ಅವಳು ತೆವಳುತ್ತಲೇ ಮನೆ ಕೆಲಸ ಮಾಡಿರುತ್ತಾಳೆ. ಮನೆಯಿಂದ ಒಳಗೆ ಬಂದ ತಕ್ಷಣ ನನ್ನ ತಂಗಿಗೆ ಆ ಕೆಲಸ ಮಾಡಿಲ್ಲ, ಈ ಕೆಲಸ ಮಾಡಿಲ್ಲ ಎಂದು ಆರೋಪಿ 1 ಹೊಡೆಯುತ್ತಿದ್ದನು. ಹೀಗಾಗಿ ನನ್ನ ತಂಗಿ ಊಟ ಬಿಡುತ್ತಿದ್ದಳು. ಅವಳು ಮಾನಸಿಕವಾಗಿ ಬಹಳ ನೋವು ಅನುಭವಿಸಿರುತ್ತಾಳೆ. ಅದಾದ ನಂತರ ನಾನು ಹೋಗಿ ಸರಿಯಾಗಿ ನೋಡಿಕೊಳ್ಳಿ ಎಂದು ಹೇಳಿದೆನು.

10. ಆಮೇಲೆ ಅವಳು ಸಾಯುವ ದಿನ ಆರೋಪಿ 1 ವೆಂಕಟೇಶ್ ಮನಸೋ ಇಚ್ಛೆ ನನ್ನ ತಂಗಿಗೆ ಹೊಡೆದು ಆರೋಪಿತರೆಲ್ಲ ಸೇರಿ ಅವಳನ್ನು ತುಂಗಭದ್ರಾ ಹೊಳೆಗೆ ಹಾಕಿ ಬಂದಿದ್ದಾರೆ. ಅದು ದಿಃ 08-07-2023 ರಂದು ಆಗಿರುತ್ತದೆ. ಮರುದಿನ ಬೆಳಿಗ್ಗೆ 5-00 ಗಂಟೆಗೆ ಆರೋಪಿ 1 ನನಗೆ ಫೋನ್ ಮಾಡಿ ನನ್ನ ತಂಗಿ ಕಾಣೆಯಾಗಿದ್ದಾಳೆ ಎಂದು ತಿಳಿಸಿದನು.

11. ನಾನು ನಮ್ಮ ತಂದೆ ಊರಿಗೆ ಹೋಗಿ ವಿಚಾರಿಸಿದೆವು ಹಾಗೂ ಅಕ್ಕಪಕ್ಕ ಹುಡುಕಿದೆವು. ಅವಳು ಸಿಗಲಿಲ್ಲ. ಹೊಳೆಗೆ ಹೋಗಿರಬಹುದಾ ಅಥವಾ ಸಂಬಂಧಿಕರ ಮನೆಗೆ ಹೋಗಿರಬಹುದಾ ಎಂದು ಎಲ್ಲಾ ಕಡೆ ಹುಡುಕಾಡಿದೆವು. ಅವಳು ಎಲ್ಲಿಯೂ ಸಿಗಲಿಲ್ಲ. ಅದಾದ ನಂತರ ನಾನು ನನ್ನ ತಂಗಿ ಕಾಣೆಯಾದ ಬಗ್ಗೆ ಈಗ ನೋಡುತ್ತಿರುವ ಕಂಪ್ಲೆಂಟ್ ನೀಡಿರುತ್ತೇನೆ. ಅದನ್ನು ನಿ.ಪಿ.6 ಎಂದು ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.6(ಎ) ಎಂದು ಗುರುತಿಸಲಾಯಿತು.

12. ಮರುದಿನ ತುಂಗಭದ್ರಾ ನದಿಯಲ್ಲಿ ಒಂದು ಶವ ಸಿಕ್ಕಿದೆ ಬಂದು ಗುರುತು ಹಿಡಿಯಿರಿ ಎಂದು ಬೆನಕನಹಳ್ಳಿ ಮೀನುಗಾರರು ಹೇಳಿದರು. ನಾನು ಹೋಗಿ ನೋಡಿದಾಗ ಅದು ನನ್ನ ತಂಗಿಯ ಶವವಾಗಿರುತ್ತದೆ. ಆರೋಪಿತರೇ ಅವಳನ್ನು ಕೊಲೆ ಮಾಡಿ ಗುರುತು ಸಿಗಬಾರದು ಎಂದು ಹೊಳೆಗೆ ಹಾಕಿದ್ದಾರೆ.

13. ಅದಾದ ನಂತರ ನಾನು ಮುಂದುವರೆದ ಪಿರ್ಯಾದನ್ನು ನೀಡಿರುತ್ತೇನೆ. ಈಗ ನೋಡುತ್ತಿರುವ ಕಂಪ್ಲೆಂಟ್ ನಾನು ನೀಡಿದ್ದು, ಅದನ್ನು ನಿ.ಪಿ.7 ಎಂದು ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.7(ಎ) ಎಂದು ಗುರುತಿಸಲಾಯಿತು.

14. ನನ್ನ ತಂಗಿಯ ಶವ ಸಿಗುವುದಕ್ಕಿಂತ ಮುಂಚೆ ಪೋಲೀಸರು, ನನ್ನ ತಂದೆ ತಾಯಿ, ನನ್ನ ಚಿಕ್ಕಪ್ಪ ಚಿಕ್ಕಮ್ಮ ಹಾಗೂ ಜನಾರ್ದನ್, ಗೋಪಿ ಬಂದಿದ್ದರು. ಅಲ್ಲಿ ಏನಾಯಿತು ಏನು ಎಂದು ನೋಡಿದರು. ಮತ್ತು ಅಲ್ಲಿ ಮಹಜರ್ ಮಾಡಿದರು. ಅಲ್ಲಿ ಕಾರಿನ ಬಲಭಾಗಕ್ಕೆ ರಕ್ತದ ಕಲೆ ಇತ್ತು ಮತ್ತು ಕಾರ್ ಪಕ್ಕದಲ್ಲಿಯೂ ಸಹ ರಕ್ತದ ಕಲೆ ಇತ್ತು. ಪಂಚನಾಮೆ ಮಾಡಿ ರಕ್ತದ ಕಲೆಗಳನ್ನು ವಶಕ್ಕೆ ಪಡೆದುಕೊಂಡಿದ್ದಾರೆ. ಈಗ ನೋಡುತ್ತಿರುವ ಪಂಚನಾಮೆಯನ್ನು ಆ ದಿನ ಮಾಡಿದ್ದು, ಸದರಿ ಪಂಚನಾಮೆಯನ್ನು ನಿ.ಪಿ.8 ಎಂದು ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.8(ಎ) ಎಂದು ಗುರುತಿಸಲಾಯಿತು.

15. ಈಗ ನೋಡುತ್ತಿರುವ ರಕ್ತದ ಕಲೆಗಳ ಫೋಟೋಗಳನ್ನು ಪೋಲೀಸರು ಆ ದಿನ ತೆಗೆದಿದ್ದು, ಆ ಫೋಟೋಗಳನ್ನು ಕ್ರಮವಾಗಿ ನಿ.ಪಿ.9 ರಿಂದ 13 ಎಂದು ಗುರುತಿಸಲಾಯಿತು. ಈಗ ನೋಡುತ್ತಿರುವ ಫೋಟೋಗಳನ್ನು ವೆಂಕಟೇಶ್ ಅವರ ಮನೆಯಲ್ಲಿ ತೆಗೆದಿದ್ದು, ಅವುಗಳನ್ನು ಪಂಚನಾಮೆ ಕಾಲಕ್ಕೆ ಪೋಲೀಸರು ತೆಗೆದಿರುತ್ತಾರೆ. ಅದರಲ್ಲಿ ನಾನು ಇರುತ್ತೇನೆ. ಅವುಗಳನ್ನು ನಿ.ಪಿ.14 ಮತ್ತು 15 ಎಂದು ಗುರುತಿಸಲಾಯಿತು. ಈಗ ನೋಡುತ್ತಿರುವ ಕಚ್ಚಾ ನಕಾಶೆಯನ್ನು ಪೋಲೀಸರು ಪಂಚನಾಮೆ ಮಾಡುವ ಕಾಲಕ್ಕೆ ಮಾಡಿದ್ದು, ಅದಕ್ಕೆ ನನ್ನ ಸಹಿ ಇರುತ್ತದೆ. ಅದನ್ನು ನಿ.ಪಿ.16 ಎಂದು ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.16(ಎ) ಎಂದು ಗುರುತಿಸಲಾಯಿತು.

16. ನನ್ನ ಸಮಕ್ಷಮ ರಕ್ತದ ಕಲೆಗಳನ್ನು ಪೋಲೀಸರು ನಿ.ಪಿ.8 ರ ಮುಖಾಂತರ ಜಪ್ತಿಮಾಡಿಕೊಂಡಿರುತ್ತಾರೆ.

17. ಈಗ ನೋಡುತ್ತಿರುವ ಸಿಮೆಂಟ್ ಕಲರ್ ಬಟ್ಟೆ ಮೇಲೆ ರಕ್ತ ಬಿದ್ದಿದ್ದು, ಅದನ್ನು ಪೋಲೀಸರು ವಶಪಡಿಸಿಕೊಂಡಿರುತ್ತಾರೆ. ಆ ಬಟ್ಟೆಯನ್ನು ನಾನು ನೋಡಿ ಗುರುತಿಸಿದ್ದು, ಅದನ್ನು ಮು.ಮಾ.1 ಎಂದು ಗುರುತಿಸಲಾಯಿತು. ಈಗ ನಾನು ಸ್ಟೆಪ್ನಿ ಕವರ್ ನೋಡುತ್ತಿದ್ದು, ಅದಕ್ಕೂ ಸಹ ರಕ್ತ ಹತ್ತಿರುತ್ತದೆ. ಅದನ್ನು ಮು.ಮಾ.2 ಎಂದು ಗುರುತಿಸಲಾಯಿತು.

18. ನನ್ನ ತಂಗಿಯ ಶವ ಹೊನ್ನಾಳಿ ತಾಲ್ಲೂಕಿನ ಬೆನಕನಹಳ್ಳಿ ಗ್ರಾಮದ ಕುರುಬರ ಕೇರಿಯ ತುಂಗಭದ್ರಾ ನದಿಯ ಒಂದು ದಡದಲ್ಲಿ ಸಿಕ್ಕಿತು. ನಾನು ಶವ ಸಿಕ್ಕ ನಂತರ ಕಂಪ್ಲೇಂಟ್ ಕೊಟ್ಟ ಮೇಲೆ ಪೋಲೀಸರು, ಅಲ್ಲಿ ತಹಶೀಲ್ದಾರ್ ಬಂದಿದ್ದರು, ಪೋಲೀಸರು ಬಂದು ಆ ಸ್ಥಳದ ಪಂಚನಾಮೆಯನ್ನು ಮಾಡಿರುತ್ತಾರೆ. ಈಗ ನೋಡುತ್ತಿರುವ ಪಂಚನಾಮೆಯನ್ನು ನಿ.ಪಿ.17 ಎಂದು ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.17(ಎ) ಎಂದು ಗುರುತಿಸಲಾಯಿತು. ಶವ ಸಿಕ್ಕ ಸ್ಥಳದ ನದಿಯ ನೀರನ್ನು ಪೋಲೀಸರು ಜಪ್ತಿ ಮಾಡಿಕೊಂಡರು.

19. ಈಗ ಸೀಲ್ ಮಾಡಿದ ಕವರಿನಿಂದ ಅರ್ಧ ಲೀಟರ್ ನೀರು ಇರುವ ಬಾಟಲಿ ತೆಗೆದಿದ್ದು, ಅದನ್ನು ನೋಡಿ ಸಾಕ್ಷಿಯು ಆ ದಿನ ಜಪ್ತಿ ಮಾಡಿದ ಹೊಳೆಯ ನೀರು ಆಗಿರುತ್ತದೆ ಎನ್ನುತ್ತಾರೆ. ಅದನ್ನು ಮು.ಮಾ.3 ಎಂದು ಗುರುತಿಸಲಾಯಿತು. (ಅದರಲ್ಲಿ ಅರ್ಧ ಬಾಟಲ್ ನಷ್ಟು ನೀರು ಇರುತ್ತದೆ. ) ಈಗ ನೋಡುತ್ತಿರುವ ಮೂರು ಪೋಟೋಗಳನ್ನು ಪೋಲೀಸರು ಶವ ಸಿಕ್ಕ ಸ್ಥಳದಲ್ಲಿ ತೆಗೆದಿದ್ದು, ಅವುಗಳನ್ನು ನಿ.ಪಿ.18 ರಿಂದ 20 ಎಂದು ಗುರುತಿಸಲಾಯಿತು. ಶವದ ಮೈಮೇಲೆ ತಲೆಗೆ ಮಫ್ಲರ್ ಹಾಕಿಕೊಂಡಿದ್ದು ಇತ್ತು ಮತ್ತು ನೈಟಿ ಹಾಕಿಕೊಂಡು ಅದರ ಮೇಲೆ ಕೆಂಪು ಬಣ್ಣದ ಸ್ವೆಟರ್ ಹಾಕಿಕೊಂಡಿದ್ದು ಇತ್ತು. ನಾನು ಶವ ನನ್ನ ತಂಗಿಯದೆಂದು ಗುರುತಿಸಿರುತ್ತೇನೆ.

20. ಶವವನ್ನು ಆರೋಪಿತರು ಅವರ ಊರಾದ ಹಿರೇಬಾಸೂರಿಗೆ ತೆಗೆದುಕೊಂಡು ಹೋದರು ಹಾಗೂ ಅಂತ್ಯ ಸಂಸ್ಕಾರವನ್ನು ಅಲ್ಲೆ ಮಾಡಿದರು.

21. ನನ್ನ ತಂಗಿಗೆ ವರದಕ್ಷಿಣೆ ಕುರಿತಾಗಿ ನಾವು ಮಾಡಿಕೊಟ್ಟ ಬಂಗಾರದ ಆಭರಣಗಳನ್ನು ನಾನು ನೋಡಿದರೆ ಗುರುತಿಸುತ್ತೇನೆ. ಈಗ ನೋಡುತ್ತಿರುವ ಮಾಂಗಲ್ಯ ಸರ ನನ್ನ ತಂಗಿಯದಿದ್ದು, ಅದನ್ನು ಮು.ಮಾ.4 ಎಂದು ಗುರುತಿಸಲಾಯಿತು. ಈಗ ನೋಡುತ್ತಿರುವ ಒಂದು ಬಂಗಾರದ ಸರ ವೆಂಕಟೇಶ್ ಗೆ ಮಾಡಿಕೊಟ್ಟದ್ದು ಇದ್ದು, ಅದನ್ನು ಮು.ಮಾ.5 ಎಂದು ಗುರುತಿಸಲಾಯಿತು. ಈಗ ನೋಡುತ್ತಿರುವ ಕಾಲ್ ಗೆಜ್ಜೆಗಳು ನನ್ನ ತಂಗಿಯದಿದ್ದು, ಅದನ್ನು ಮು.ಮಾ.6 ಎಂದು ಗುರುತಿಸಲಾಯಿತು.

22. ನನ್ನ ತಂಗಿ ಮದುವೆಯಾಗಿ ಮೂರು ವರ್ಷದ ಒಳಗೆ ತೀರಿಕೊಂಡಿದ್ದಾಳೆ. ಆರೋಪಿತರು ನನ್ನ ತಂಗಿಗೆ ಸಾಕಷ್ಟು ಚಿತ್ರಹಿಂಸೆ ಕೊಡುತ್ತಿದ್ದರು, ಅವಳಿಗೆ ಹೊಡೆದು ಮನೆಯಲ್ಲಿ ಸಾಯಿಸಿ ಹೊಳೆಗೆ ಹಾಕಿದ್ದಾರೋ ಅಥವಾ ಹೊಳೆಯಲ್ಲಿಯೇ ಸಾಯಿಸಿದ್ದಾರೋ ಎಂಬುದು ಗೊತ್ತಿಲ್ಲ. ಏನು ಗೊತ್ತಾಗಬಾರದು ಎಂದು ಹೊಳೆಯಲ್ಲಿ ಎಸೆದಿದ್ದಾರೆ. ವರದಕ್ಷಿಣೆ ಬೇಡಿಕೆಗೆ ಆ ರೀತಿ ಮಾಡಿದ್ದಾರೆ. ಪೋಲೀಸರು ನನ್ನ ಹೇಳಿಕೆಯನ್ನು ಪಡೆದಿದ್ದಾರೆ.

**ಪಾಟೀಸವಾಲುಃ ಆರೋಪಿ 1 ರಿಂದ 4, 6 ಮತ್ತು 7 ರ ಪರ ಶ್ರೀಮತಿ ಕೆಎನ್‌ಯು ವಕೀಲರಿಂದ.**

ಆರೋಪಿ ಪರ ವಕೀಲರು ಪಾಟೀಸವಾಲು ಕಾಯ್ದಿರಿಸಿ, ಚಾ.ಸಾ.6 ಮತ್ತು 7 ಸಾಕ್ಷಿ ಮುಗಿಯಲಿ ಎಂದು ಹೇಳಿರುತ್ತಾರೆ. ಅವರ ಅರ್ಜಿಯನ್ನು ಪುರಸ್ಕರಿಸಲಾಗಿದೆ, ಆದ್ದರಿಂದ ಪಾಟೀಸವಾಲು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ . ಹೇ. ಕೇ. ಸರಿಯಾಗಿದೆ.

(ಕೃಷ್ಣಮೂರ್ತಿ ಆರ್. ಪಡಸಲಗಿ)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ದಾವಣಗೆರೆ.